## **ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

ದಿನಾಂಕಃ 31 ನೇ ಡಿಸೆಂಬರ್ ತಿಂಗಳು 2024 ರಂದು

**ಸಿಸಿ ನಂ.19/2022**

**ಫಿರ್ಯಾದುದಾರಃ** ನರಸಿಂಹ ಬಿನ್ ಶ್ರೀನಿವಾಸ,
ವಯಸ್ಸು ಸುಮಾರು 25 ವರ್ಷ,
ವಾಸಃ # 418 ಆರ್.ಟಿ.ಓ. ಆಫೀಸ್ ಹಿಂಭಾಗ,
ಮೂರೂರಮ್ಮ ಕಾಲೋನಿ, ಕಲ್ಕುಣಿಕೆ,
ಹುಣಸೂರು ಟೌನ್, ಮೈಸೂರು ಜಿಲ್ಲೆ.

**- ವಿರುದ್ಧ -**

**ಆರೋಪಿಃ** ಕುಮಾರ್.ಎಸ್.ಬಿನ್ ಸ್ವಾಮಿ ಯಾನೆ ಕ್ಯಾಸೆಟ್ ಸ್ವಾಮಿ,
ವಯಸ್ಸು ಸುಮಾರು 36 ವರ್ಷ, ವಾಸಃ ಶಿವಜ್ಯೋತಿ ನಗರ,
ಹುಣಸೂರು ಟೌನ್, ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 251 ರ ಅಡಿಯಲ್ಲಿ ಆರೋಪಣಾ ಸಾರಾಂಶ**

ಆರೋಪಿಯಾದ ನೀವು ಫಿರ್ಯಾದುದಾರರಿಗೆ ಚಿರಪರಿಚಯಾಸ್ತರಾಗಿದ್ದು, ನೀವು ಫಿರ್ಯಾದುದಾರರ ಬಳಿ ಬಂದು ನಿಮ್ಮ ಹಿಂದಿನ ಸಾಲ ತೀರಿಸಲು ಮತ್ತು ನಿಮ್ಮ ಟಿ.ಟಿ.ವಾಹನದ ರಿಪೇರಿ ಮಾಡಿಸಲು ಹಾಗೂ ಗೃಹಕೃತ್ಯದ ಖರ್ಚಿಗಾಗಿ ಹಣದ ಅವಶ್ಯಕತೆ ಇದೆ ಎಂದು ಒಂದು ಲಕ್ಷದ ಎಂಭತ್ತುಸಾವಿರ (ರೂ.1,80,000/-) ಹಣವನ್ನು ಪಡೆದುಕೊಂಡಿದ್ದು, ಸದರಿ ಸಾಲದ ತಿರುವಳಿಗಾಗಿ ದಿನಾಂಕಃ 30.12.2020 ರಂದು ನಗದಾಗುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಎಂ.ಬೈಪಾಸ್ ರಸ್ತೆ, ಹುಣಸೂರಿನ ಸಿಟಿ ಶಾಖೆಯ ಚೆಕ್ ಸಂಖ್ಯೆ 964469 ಅನ್ನು ರೂ.1,80,000/- ಗಳಿಗೆ ನೀಡಿದ್ದು, ಅದನ್ನು ಫಿರ್ಯಾದಿದಾರರು ಯೂನಿಯನ್ ಬ್ಯಾಂಕ್, ಹುಣಸೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣಕ್ಕಾಗಿ ಸದರಿ ಚೆಕ್ ದಿನಾಂಕಃ 01.01.2021 ರ ಬ್ಯಾಂಕಿನ

ಹಿಂಬರಹದೊಂದಿಗೆ ಅಮಾನ್ಯಗೊಂಡು ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದಿದಾರರು ದಿನಾಂಕಃ 15.01.2021 ರಂದು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸು ನೀಡಿದ್ದು ಸದರಿ ನೋಟೀಸು ದಿನಾಂಕ 16.01.2021 ರಂದು ನಿಮಗೆ ಖುದ್ದಾಗಿ ಜಾರಿಯಾಗಿದ್ದು ಆದರೂ ಸಹ ನೀವು ಚೆಕ್ ನಲ್ಲಿ ನಮೂದಿಸಿದ ಹಣವನ್ನಾಗಲೀ ನೋಟೀಸಿಗೆ ಉತ್ತರವನ್ನಾಗಲೀ ನೀಡದೆ ಇರುವುದರಿಂದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

| | |
|---|---|
| ಪ್ರಶ್ನೆಃ1 | ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆಃ 2 | ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ? |
| ಉತ್ತರಃ | ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು. |

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

(ಅನಿತ)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ಆರೋಪಿಯ ಸಹಿಃ